ವಸತಿ ಗೃಹಗಳಿಗೆ ವಾಹನ ನಿಲ್ಲಿಸಲು ನಿರ್ಮಿಸಿರುವ ಶೆಡ್ಡುಗಳು ದುರಸ್ತಿ.

2424 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದ ಲಾಲ್‌ಬಾಗ್-ಸಿದ್ದಾಪುರದಲ್ಲಿರುವ ಲೋಕೋಪಯೋಗಿ ಇಲಾಖೆಯ ವಸತಿಗೃಹಗಳಲ್ಲಿನ ವಾಹನ ನಿಲ್ಲಿಸಲು ನಿರ್ಮಿಸಿರುವ ಶೆಡ್ಡುಗಳು ದುರಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೇ?*

ಆ) *ಹಾಗಿದ್ದಲ್ಲಿ ಸದರಿ ಶೆಡ್ಗಳನ್ನು ದುರಸ್ಥಿ ಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ.*

ಇ) *ವಸತಿಗೃಹಗಳಲ್ಲಿ ಹಾಕಿರುವ ಮೆಲ್ಗೆಳು ಕಿತ್ತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ, ಅವುಗಳನ್ನು ದುರಸ್ಥಿ ಮಾಡಿಸಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಬಂದಿದೆ.

ಈ) ಕ್ರಮ ಕೈಗೊಳ್ಳಲಾಗುವುದು.

ವಿದ್ಯುತ್ ಮಂಡಳಿಗೆ ಬರಬೇಕಾಗಿರುವ ಹಣ.

2381 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಪುರಸಭೆಗಳಿಂದ ಕರ್ನಾಟಕ ವಿದ್ಯುತ್ ಮಂಡಳಿಗೆ ಬರಬೇಕಾಗಿರುವ ಹಣವೆಷ್ಟು? ಎಲ್ಲಾ ಪುರಸಭೆಗಳ ವಿವರಗಳನ್ನೊದಗಿಸುವುದು.*

ಆ) *ಈ ಹಣವನ್ನು ಕೊಡುವಲ್ಲಿ ಪುರಸಭೆಗಳು ಹಣ ಹೊಂದಿವೆಯೇ? ಈ ಹಣವನ್ನು ಮನ್ನಾ ಮಾಡುವ ಕಾರ್ಯಕ್ರಮ ವಿದೆಯೇ?*

ಇ) *ಈ ಬಾಕಿ ಹಣದಿಂದ ಹೊಸದಾಗಿ ರಸ್ತೆ ದೀಪ ಹಾಕಲು ಇಲಾಖೆಯವರು ಒಪ್ಪದೇ ಇರುವುದು ನಿಜವೇ?*

ಶ್ರೀ. ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 1995ರ ಮಾರ್ಚ್ ಅಂತ್ಯಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ರಾಜ್ಯದ ವಿವಿಧ ಪುರಸಭೆಗಳಿಂದ ಬರಬೇಕಾಗಿದ್ದ ಒಟ್ಟು ಬಾಕಿ ಹಣದ ಮೊತ್ತ 474.92 ಲಕ್ಷ ರೂ.ಗಳು ಬಾಕಿ ಹೊಂದಿದ್ದ ಪುರಸಭೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಪುರಸಭೆಗಳ ಆರ್ಥಿಕ ಸ್ಥಿತಿಗತಿ ಉತ್ತಮ ಇಲ್ಲದಿದ್ದರೂ ಸಹ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಎದುರಿಸುತ್ತಿರುವ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಬಾಕಿ ಹಣವನ್ನು ಮನ್ನಾ ಮಾಡುವುದು ಸಾಧ್ಯವಿಲ್ಲ.

ಇ) ಕೇವಲ ಗ್ರಾಮ ಪಂಚಾಯ್ತಿ ಮತ್ತು ಟೌನ್ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಮಾತ್ರ ಹೆಚ್ಚುವರಿ ಬೀದಿ ದೀಪಗಳನ್ನು ಹಾಕುವ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ. ಪುರಸಭೆ, ನಗರ ಸಭೆ ಮತ್ತು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಹೆಚ್ಚುವರಿ ಬೀದಿ ದೀಪಗಳನ್ನು ಬಾಕಿ ಇದ್ದರೂ ಹಾಕಲಾಗುತ್ತಿದೆ.